ಡಾ. ವಿನಾಯಕ್ ಮಗುವನ್ನು ಪರೀಕ್ಷಿಸಿದ ನಂತರದಲ್ಲಿ ಅದನ್ನು ಎದ್ದು ನಿಲ್ಲಿಸಲು ಮಾಡಿದ ಪ್ರಯತ್ನವೆಲ್ಲವೂ ನಿಷ್ಫಲವಾಗುತ್ತಿದೆ! ಈ ತನ್ನ ಮಗು ತನಗಿನ್ನು ದಕ್ಕುವುದಿಲ್ಲವೇನೋ... ಎಂಬ ಭಯದಿಂದ ಕುಮುದ, ತನ್ನ ತಂಗಿ ಕ್ಷಮಾಳನ್ನು ಹಿಡಿದು ಬಿಕ್ಕಿ ಬಿಕ್ಕಿ ಅಳುತ್ತಿದ್ದಾಳೆ. ಈ ಹಂತದಲ್ಲಿ ಅಕ್ಷಯಕುಮಾರನೂ ಸ್ವಲ್ಪ 'ಮನುಷ್ಯ'ನಂತಾದ. ಮಗು ಒಮ್ಮೆ ಬದುಕಿದರೆ ಸಾಕು... ಆತನ ಮಗ್ಗಿಲೋಕವನ್ನು ತಾನು ಈಗಲೇ ಮರೆತೆನೆಂಬಂತೆ, ಆ ಮಗುವಿನ ಪಕ್ಕದಲ್ಲೇ ಕೂತು ಕಣ್ಣೀರು ಜಿನುಗಿಸತೊಡಗಿದ್ದ. ವೈದ್ಯರ ನಿರ್ದೇಶನದಂತೆ ಮಗುವನ್ನು ತುರ್ತಾಗಿ ಮತ್ತೆ ಐಸಿಯುಗೆ ಒಯ್ಯಲಾಯಿತು. ಸತತ ಎರಡು ವಾರ ಕಳೆದರೂ ಕೌಶಿಕನಿಗೆ ಮಾತೂ ಬರಲಿಲ್ಲ, ನಡೆಯುವ ಕಾಲುಗಳಿಗೆ ಶಕ್ತಿಯೂ ಬರಲಿಲ್ಲ. ಆದರೂ ವೈದ್ಯರು ತಮ್ಮ ಪ್ರಯತ್ನವನ್ನು ಸತತವಾಗಿ ಮುಂದುವರಿಸಿದ್ದರು.

ಈ ನಡುವೆ ಡಾ. ವಿನಾಯಕ್ ಅವರು ಮಗುವನ್ನು ಉಳಿಸಿಕೊಳ್ಳಲೇಬೇಕೆಂಬ ಛಲದಿಂದಲೋ ಏನೋ, ಮಗುವಿನ ಅಜ್ಜಯ್ಯ ಮತ್ತು ಅಮ್ಮನನ್ನು ಕರೆಸಿ, ಮಗುವಿನ ಆಟ, ಪಾಠ, ಓಡಾಟ, ತುಂಟಾಟಗಳ ಬಗ್ಗೆ ಹಲವು ಆಯಾಮಗಳಲ್ಲಿ ಅವರಿಬ್ಬರನ್ನೂ ಪ್ರಶ್ನಿಸಿದ್ದರು. ಕೊನೆಗೆ ಯಾವುದೋ ಸತ್ಯವನ್ನು ಕಂಡು ಹುಡುಕಿದವರಂತೆ ಅವರು, ಮಗುವಿಗೆ ಸ್ಪೈಕ್ರಿಯಾಟ್ರಿ ಟ್ರೀಟ್‌ಮೆಂಟ್ ನೀಡುವ ಅಗತ್ಯವಿದೆಯೆಂದು ತೀರ್ಮಾನಿಸಿದವರೇ, ಫೋನ್ ಮೂಲಕ ಸ್ಪೈಕ್ರಿಯಾಟ್ರಿ ವಿಭಾಗದ ಮುಖ್ಯಸ್ಥೆ ಮತ್ತು ವೈದ್ಯೆ ಡಾ. ಸ್ವಪ್ನ ಹೆಗ್ಡೆ ಅವರನ್ನು ತಕ್ಷಣವೇ ಸಂಪರ್ಕಿಸಿ, ಅದೇನೋ ಚರ್ಚಿಸಿದವರೆ... ತನ್ನ ಕೊಠಡಿಗೊಮ್ಮೆ ಬಂದು ಹೋಗುವಂತೆ ಆಕೆಯನ್ನು ವಿನಂತಿಸಿಕೊಂಡಿದ್ದರು. ವೈದ್ಯೆ ಡಾ. ಸ್ವಪ್ನ ಹೆಗ್ಡೆ ಅವರು ಇನ್ನೇನು ತನ್ನ ಕೊಠಡಿಗೆ ಬರಬಹುದು ಎಂಬ ನಿರೀಕ್ಷೆಯಲ್ಲಿದ್ದ... ಡಾ. ವಿನಾಯಕ್ ಅವರು ರಾಮಯ್ಯಾಳ್ವರಲ್ಲಿ 'ತಾವು ಒಂದಷ್ಟು ಹೊತ್ತು ಹೊರಗಿರಬಹುದೇ... ನಿಮ್ಮ ಮಗುವಿನ ಹೆಚ್ಚಿನ ಟ್ರೀಟ್‌ಮೆಂಟ್‌ಗಾಗಿ ನಮ್ಮ ಆಸ್ಪತ್ರೆಯ ವೈದ್ಯೆ ಡಾ. ಸ್ವಪ್ನ ಹೆಗ್ಡೆಯವರನ್ನು ಕರೆಸಿಕೊಂಡಿದ್ದೇನೆ. ಅವರ ಜೊತೆ ಸಮಾಲೋಚಿಸಬೇಕಿದೆ' ಎಂದು ಹೇಳಿ, ಅವರಿಬ್ಬರನ್ನೂ ಹೊರಕಳುಹಿಸಿದ್ದರು. ಅತ್ತ ರಾಮಯ್ಯಾಳ್ವರು ಮಗಳ ಜೊತೆಗೆ ಕೊಠಡಿಯಿಂದ ಹೊರ ನಡೆಯುವುದಕ್ಕೂ, ಇತ್ತ ಡಾ. ಸ್ವಪ್ನ ಹೆಗ್ಡೆ ಕಾರಿಡಾರ್‌ನಲ್ಲಿ ಡಾ. ವಿನಾಯಕ್ ಅವರ ಕೊಠಡಿಯತ್ತ ನಡೆದು ಬರುವುದಕ್ಕೂ ಸರಿ ಹೋಯ್ತು.

ರುಮು ರುಮು ಬೀಸುವ ಖೆಡ್ಡೆಸದ ಕರೆಗಾಳಿಯಂತೆ ಆಸ್ಪತ್ರೆಯ ಕಾರಿಡಾರಿನಲ್ಲಿ ವೇಗವಾಗಿ ಹೆಜ್ಜೆ ಹಾಕುತ್ತಾ ಬಂದ ಡಾ. ಸ್ವಪ್ನ ಹೆಗ್ಡೆಯು ಇನ್ನೇನು ಡಾ. ವಿನಾಯಕ್ ಅವರ ಕೊಠಡಿಗೆ ಹೊಗಬೇಕೆನ್ನುವಷ್ಟರಲ್ಲಿ... ಆಕೆಗೆ ಇದ್ದಕ್ಕಿದ್ದಂತೆ ಏನನಿಸಿತೋ ಏನೋ ?! ತಟ್ಟನೆ ಆಕೆ ಹೋದಷ್ಟೇ ವೇಗದಲ್ಲಿ ಕಾರಿಡಾರ್‌ನತ್ತ ತಿರುಗಿ ಬಂದವಳೆ, ಹೊರಗೆ ಕಾರಿಡಾರ್‌ನಲ್ಲಿ ಅಯೋಮಯ ಸ್ಥಿತಿಯಲ್ಲಿ ನಿಂತಿದ್ದ ರಾಮಯ್ಯಾಳ್ವರನ್ನು ಒಂದರೆ ಗಳಿಗೆ ದಿಟ್ಟಿಸಿದವಳು, ಮೆತ್ತಗಿನ ಧ್ವನಿಯಲ್ಲಿ 'ರಾಮ್ ಮಾಮಾ... ನೀವು ನಮ್ಮ ರಾಮ್ಮಾಮ ಅಲ್ವ!?...' ಎಂದು ಕೇಳಿಯೇ ಬಿಟ್ಟಿದ್ದಳು. ಒಂದು ಕ್ಷಣ ಏನು ಹೇಳಬೇಕೆಂಬ ಅಚ್ಚರಿ ಭಾವದಲ್ಲಿ ಮುಳುಗೆದ್ದ ರಾಮಯ್ಯಾಳ್ವರು... ನಿಧಾನಕ್ಕೆ ಆ ಧ್ವನಿಯಲ್ಲಿರುವ ಆಪ್ತತೆಯ ಮೂಲಕವೇ ಬಾಲ್ಯದ ತಮ್ಮ 'ಸೊಪ್ಪಿ'ಯನ್ನು ಗುರುತಿಸಿಕೊಂಡಿದ್ದರು. ಅವರ ಎದೆ ಸಂತಸದಿಂದ ಬಿರಿಯುವಂತಾಗಿತ್ತು, ಇದೇ ಸ್ಥಿತಿ ಕುಮುದಳದ್ದೂ ಆಗಿತ್ತು. ಮರುಭೂಮಿಯಲ್ಲಿ ನೀರಕೊಳದೊಳಗೆ ಅರಳಿ ನಿಂತ ತಾವರೆ ಹೂವನ್ನು ಕಂಡಂತಾಗಿತ್ತು ಅವರಿಬ್ಬರ ಸ್ಥಿತಿ.